**O.S./ 5343/2019**
**Plaintiff examined as PW.1**

ದಿನಾಂಕಃ **02.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **1** ರಿಂದ **3** ಗಳ ಪರ ಶ್ರೀ .ಎಸ್ .ಜೆ .ವಕೀಲರಿಂದಃ

ನಾನು ಬಿ ಎಸ್ ಸಿ ಕಂಪ್ಯೂಟರ ಸೈನ್ಸ್ ನಲ್ಲಿ ಪಧವಿ ಮಾಡಿದ್ದೇನೆ. ನಿಮ್ಮ ತಂದೆಯವರು ಎನ್ ಜಿ ಎಫ್ ನಲ್ಲಿ ಇಂಜಿನಿಯರಾಗಿದ್ದರು ಎಂದರೆ ಸರಿ. ನಿಮ್ಮ ತಾಯಿಯವರು ಬಿ ಎಂ ಟಿ ಸಿ ನಲ್ಲಿ ಒಳ್ಳೆ ಕೆಲಸನಲ್ಲಿ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅನಾರೋಗ್ಯದ ಕಾರಣ ನಮ್ಮ ತಾಯಿಯವರು ಕೆಲಸವನ್ನು ಬಿಟ್ಟಿದ್ದರು. ನೀವು ಪದವಿ ಮುಗಿದ ನಂತರ ಏನು ಕೆಲಸ ಮಾಡುತ್ತಿದ್ದೀರಿ ಎಂದರೆ ಮದುವೆ ಆದ ಹೊಸದಲ್ಲಿ ನಮ್ಮ ಯಜಮಾನರು ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ ನಂತರ ನಾನು ಶಿಕ್ಷಕಿಯಾಗಿ ಚೈತನ್ಯ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಈಗಲೂ ಸಹ ಕೆಲಸ ಮಾಡುತ್ತಿದ್ದೇನೆ, ವೈಧ್ಯರು ನನ್ನ ಅನಾರೋಗ್ಯದ ಕಾರಣ ಬೇಡ ಎಂದರೆ ಬಿಡುವ ಸಾಧ್ಯತೆ ಇದೆ. ನಿಮ್ಮದು ಅರೆಂಜ್ ಮ್ಯಾರೇಜ್ ಎಂದರೆ ಸರಿ. ನಿಮ್ಮ ಮಾವ ಪ್ರತಿವಾದಿ 2 ರವರು ಏನು ಕೆಲಸ ಮಾಡುತ್ತಿದ್ದರು ಎಂದರೆ ವಿಶ್ವಾಸ ಸಿಮೆಂಟ ಪ್ರೊಡೆಕ್ಟ (electrical poles manufacturing business) ನ್ನು ನನ್ನ ಗಂಡ ಮತ್ತು ಮಾವ ಜಂಟಿಯಾಗಿ ಮಾಡುತ್ತಿದ್ದರು. ನೀವು ಮದುವೆ ಯಾದ ಕಾಲಕ್ಕೆ ನಿಮ್ಮ ಯಜಮಾನರು ಚೆನ್ನಾಗಿ ಬಿಸಿನೆಸ ಮಾಡಿ ಹಣ ಸಂಪಾದಿಸುತ್ತಿದ್ದರು ಎಂದರೆ ಸರಿ. ನಿಮ್ಮ ಎರಡನೇ ಮಗಳು

ತ್ರೀಶಾ ರವರದ್ದು ಪ್ರಸ್ತುತ ಈಗ ಮದುವೆ ಆಗಿದೆ ಎಂದರೆ ಸರಿಯಲ್ಲ. ಅವರಿಗೆ ವಯಸ್ಸು ಎಷ್ಟು ಎಂದರೆ 22 ವರ್ಷ. 1 ನೇ ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ ಎಷ್ಟು ಎಂದ ಹೇಳಬಹುದೆ ಎಂದರೆ 30X60 ಸೈಟ 1800 ಚದುರಡಿಗಳು. ಅದರಲ್ಲಿ ನಿಮ್ಮ ಯಜಮಾನರು ಮನೆ ಕಟ್ಟಿದ್ದರಾ ಎಂದರೆನಮ್ಮ ಮಾವ ರಾಮರೆಡ್ಡಿರವರು ಮನೆ ಕಟ್ಟಿದ್ದರು. ಆ ಮನೆಯಲ್ಲಿ ಎಷ್ಟು ಭಾಗಗಳಿವೆ ಎಂದು ಹೇಳಬಹುದೆ ಎಂದರೆ ಗ್ರೌಂಡ ಪ್ಲೋರನಲ್ಲಿ ಒಂದು ದೊಡ್ಡ ಮನೆ, ಮನೆಯ ಹಿಂದುಗಡೆ ಒಂದು ಮನೆ ಇದೆ, ಮೊದಲನೆ ಮಹಡಿಯಲ್ಲಿ ಎರಡು ಮನೆ ಇದೆ, ಅದರ ಮೇಲೆ ಒಂದು ರೂಮ್ ಇದೆ, ಅದರಲ್ಲಿ ಅರ್ಧ ಕಟ್ಟಡ ಕಟ್ಟಿದ್ದು ಇನ್ನು ಅರ್ಧ ಭಾಗ ನಾವು ದಾವೆ ಸಲ್ಲಿಸಿದ್ದರಿಂದ ನಿಲ್ಲಿಸಿದ್ದಾರೆ. ಮೊದಲನೆ ಮಹಡಿಯ ಒಂದು ಮನೆಯಲ್ಲಿ ನೀವು ಇದ್ದರಿ ಇನ್ನೊಂದು ಮನೆಯಲ್ಲಿ ಬಾಡಿಗೆ ದಾರರು ಇದ್ದಾರೆ ಎಂದರೆ ಸರಿ. ನಿಪಿ-7 ರಲ್ಲಿರುವ ವಿಳಾಸದಲ್ಲೆ ನೀವು ವಾಸವಾಗಿದ್ದೀರಿ ಎಂದರೆ ಸರಿ.

ದಾವಾ ಬಿ ಶೆಢ್ಯೂಲ್ ಸ್ವತ್ತು ಎಲ್ಲಿ ಬರುತ್ತದೆ ಎಂದು ಹೇಳಬಹುದೆ ಎಂದರೆ ನಂದಿ ಹೋಬಳಿ, ದೇವನಹಳ್ಳಿ ತಾಲ್ಲೂಕು, 1 ಎಕರೆ 31 ಗುಂಟೆ. ಅದರ ಚೆಕ್ ಬಂಧಿ ಹೇಳಬಹುದೆ ಎಂದರೆ ನನಗೆ ಗೊತ್ತಿಲ್ಲ. ದೇವನಹಳ್ಳಿಯಲ್ಲಿ 1 ಎಕರೆಗೆ ಅಂದಾಜು ಮಾರುಕಟ್ಟೆ ಬೆಲೆ 1 ರಿಂದ 1.50 ಕೋಟಿ ಬೆಲೆ ಇದೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ಇನ್ನೂ ಜಾಸ್ತಿ ಇರಬಹುದು. ದಾವಾ ಬಿ ಶೆಢ್ಯೂಲ್ ಸ್ವತ್ತನ್ನು ನಿಮ್ಮ

ಯಜಮಾನರು ಅವರ ಸ್ವ ಆದಾಯದಿಂದ ಖರೀದಿ ಮಾಡಿದ್ದರು ಮತ್ತು ಅದು ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಮಾವನವರು ಖರೀದಿ ಮಾಡಿದ್ದು. ನಿಮ್ಮ ಮಾವನವರು ಖರೀದಿ ಮಾಡಿದ್ದರು ಎಂದು ತೋರಿಸಲು ನಿಮ್ಮ ಬಳಿ ಇರುವ ದಾಖಲೆಗಳನ್ನು ತೋರಿಸಲು ನಿಮಗೆ ತೊಂದರೆ ಇದೇಯೆ ಎಂದರೆ ಇಲ್ಲ. ನ್ಯಾಯಾಲಯಕ್ಕೆ ಈಗಾಗಲೇ ಸಲ್ಲಿಸಿದ್ದೇವೆ. ನ್ಯಾಯಾಲಯಕ್ಕೆ ಸದರಿ ದಾಖಲೆಗಳನ್ನು ಸಲ್ಲಿಸದಿದ್ದರೂ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ನನಗೆ ಕಾಲಾವಕಾಶ ಕೊಟ್ಟರೆ ಮುಂದಿನ ದಿನಾಂಕದಂದೂ ಹಾಜರು ಪಡಿಸುತ್ತೇನೆ.

ನಿಮ್ಮ ಅತ್ತೆಯವರು ಕ್ಯಾನ್ಸರ ರೋಗದಿಂದ ಬಳಲುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಿಂದೆ ಅವರು ಕ್ಯಾನ್ಸರ ಪಿಡಿತ ರಾಗಿದ್ದರು ಅದು ನಿಮಗೆ ಗೊತ್ತಿತ್ತು ಎಂದರೆ ಸರಿ. ಅವರನು ನೋಡಿಕೊಳ್ಳುವ ಜವಾಬ್ದಾರಿಯನ್ನು ನೀವು ಈಗ ತೆಗೆದುಕೊಂಡಿದ್ದೀರಾ ಎಂದರೆ ಅವರೇ ನಮ್ಮನ್ನು ಅಚೆ ಹಾಕಿದ್ದರು ಹಾಗಾಗಿ ಜವಾಬ್ದಾರಿ ತೆಗೆದುಕೊಳ್ಳುವ ಪ್ರಶ್ನೆ ಬರಲಿಲ್ಲ. ನಿಮ್ಮ ನಾದನಿರವರು ಮದುವೆ ಆಗದೆ ನಿಮ್ಮ ಅತ್ತೆ ಅವರ ತಾಯಿಯವರನ್ನು ಆರೈಕೆ ಮಾಡಿಕೊಂಡು ಗ್ರೌಂಡ ಫ್ಲೋರನಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ನಾದನಿಯವರ ವೈಯಕ್ತಿಕ ಜೀವನದ ಬಗ್ಗೆ ನನಗೆ ಗೊತ್ತಿಲ್ಲ. ನೀವು ಅವರ ಮನೆಯ ಮೇಲೆ ವಾಸವಾಗಿದ್ದರಿಂದ ಅವರ ಜೊತೆ ಜಗಳ ಮಾಡಿಕೊಂಡು ಅವರಿಗೆ ತೊಂದರೆ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ನಮ್ಮ ಯಜಮಾನರು ಕುಡಿದುಕೊಂಡು ಬಂದು ನಮಗೆ ತೊಂದರೆ ಕೊಡುತ್ತಾರೆ. ನೀವು ನಿಮ್ಮ ಯಜಮಾನರ ವಿರುದ್ಧ ಸುಳ್ಳು ಪೋಲಿಸ ದೂರು ದಾಖಲಿಸಿ ಅವರಿಗೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸಿ ಮತ್ತು ಡಿ ಸ್ವತ್ತಿನ ಸಂಬಂಧ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಯಜಮಾನರ ಹೆಸರಿನಲ್ಲಿ ದಾವಾ ಶೆಡ್ಯೂಲ್ ಸಿ ಮತ್ತು ಡಿ ಸ್ವತ್ತುಗಳು ಇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಖಾತಾ ವರ್ಗಾವಣೆ ಆಗಿರುವ ದಾಖಲೆಯನ್ನು ಕೊಟ್ಟಿದ್ದೇವೆ. ದಾವಾ ಶೆಡ್ಯೂಲ್ ಸಿ ಮತ್ತು ಡಿ ಸ್ವತ್ತಿನ ಮಾಲೀಕತ್ವ ತೋರಿಸಲು ಮೂಲ ಪತ್ರಗಳನ್ನು ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸಿ ಮತ್ತು ಡಿ ಸ್ವತ್ತಿನ ಸಂಬಂಧ ದಾಖಲೆಗಳ ನ್ನು ಹಾಜರು ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ನಾನು ಈಗಾಗಲೆ ಸಲ್ಲಿಸಿದ್ದೇನೆ ಮತ್ತೊಮ್ಮೆ ಪರಿಶೀಲಿಸಿ ಹೇಳುತ್ತೇನೆ. ದಾವಾ ಶೆಡ್ಯೂಲ್ ಡಿ ಸ್ವತ್ತು ನಿಮ್ಮ ಯಜಮಾನರ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಶೆಡ್ಯೂಲ್ ಸಿ ಸ್ವತ್ತು ನಿಮ್ಮ ಯಜಮಾನರ ಸ್ವಯಾರ್ಜಿತ ಆಸ್ತಿ ಅದಕ್ಕೂ ಇದಕ್ಕೂ ನಿಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ನಮ್ಮ ಮಾವ ಮತ್ತು ನನ್ನ ಗಂಡನ ಹೆಸರಿನಲ್ಲಿ ಇದೆ ನನಗೆ ಅವಕಾಶ ಕೊಟ್ಟರೆ ದಾಖಲೆಗಳನ್ನು ತಂದು ತೋರಿಸುತ್ತೇನೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**